# D.El.Ed

# Question Paper

Code No. : **304-K**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು, 560 003**

**KARNATAKA SECONDARY EDUCATION EXAMINATION BOARD, MALLESHWARAM, BENGALURU, 560 003**

# ಪ್ರಥಮ ವರ್ಷದ ಡಿ.ಎಲ್.ಇಡಿ. ಮುಖ್ಯ ಪರೀಕ್ಷೆ, ಜುಲೈ, 2022

# First Year D.El.Ed. Main Examination, July, 2022

| | | |
|---|---|---|
| Subject / ವಿಷಯ | : | **Facilitating Learning ( LPS )**<br>**First Language – KANNADA**<br>**ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ.)**<br>**ಪ್ರಥಮ ಭಾಷೆ – ಕನ್ನಡ** |
| Date of Exam. / ಪರೀಕ್ಷೆಯ ದಿನಾಂಕ | : | 06. 07. 2022 |
| Maximum Marks / ಗರಿಷ್ಠ ಅಂಕಗಳು | : | 60 |
| Duration of Exam. / ಪರೀಕ್ಷೆ ಅವಧಿ | : | 3 Hours / 3 ಗಂಟೆಗಳು |
| Time / ಸಮಯ | : | 10.00 A.M. to 1.00 P.M. |

**ಅಭ್ಯರ್ಥಿಗಳಿಗೆ ಸಾಮಾನ್ಯ ಸೂಚನೆಗಳು / *General Instructions to the Candidates :***

1. ಅಭ್ಯರ್ಥಿಗಳು ತನ್ನ ನೋಂದಣಿ ಸಂಖ್ಯೆಯನ್ನು ಪ್ರವೇಶ ಪತ್ರದಲ್ಲಿ ಮುದ್ರಿಸಿರುವಂತೆಯೇ ಉತ್ತರ-ಪುಸ್ತಿಕೆಯಲ್ಲಿ ನೀಡಿರುವ ನಿಗದಿತ ಸ್ಥಳದಲ್ಲಿ ಸ್ಪಷ್ಟವಾಗಿ ಬರೆಯಿರಿ.
   Candidates should write their Register Number on the Answer Booklet as printed in their admission ticket.
2. ಅಭ್ಯರ್ಥಿಗಳು ಹೆಚ್ಚುವರಿ ಉತ್ತರ ಹಾಳೆಗಳನ್ನು ಪಡೆದಲ್ಲಿ, ಉತ್ತರ ಹಾಳೆಗಳ ಮುಖಪುಟದ ಮೇಲಿನ ನಿಗದಿತ ಸ್ಥಳದಲ್ಲಿ ಮುಖ್ಯ ಉತ್ತರ-ಪುಸ್ತಿಕೆಯ ಕ್ರಮ ಸಂಖ್ಯೆಯನ್ನು ಬರೆಯತಕ್ಕದ್ದು.
   Candidates should write their Main Answer Booklet Number on the additional answer sheets in the space provided.
3. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
   This Question Paper has been sealed by reverse jacket. You have to cut on the right side to open the Question Paper at the time of commencement of the examination. Check whether all the pages of the Question Paper are intact.
4. ಅಭ್ಯರ್ಥಿಗಳು ನಿಗದಿಪಡಿಸಿದ ಸ್ಥಳವನ್ನು ಹೊರತುಪಡಿಸಿ ಇನ್ನಿತರೇ ಯಾವುದೇ ಪುಟಗಳಲ್ಲಿ ನೋಂದಣಿ ಸಂಖ್ಯೆ, ಗುರುತು ಹಾಗೂ ಚಿಹ್ನೆ ಇನ್ನಿತರೆ ಯಾವುದೇ ಮಾಹಿತಿಗಳನ್ನು ಬರೆಯಬಾರದು. ಒಂದು ವೇಳೆ, ಈ ಬಗೆಯ ಯಾವುದೇ ಮಾಹಿತಿಗಳನ್ನು ಉತ್ತರ-ಪುಸ್ತಿಕೆಯಲ್ಲಿ ಬರೆದ ಪಕ್ಷದಲ್ಲಿ ಅಂತಹ ಉತ್ತರ-ಪುಸ್ತಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.
   Candidates should not write Register Number, mark, sign or any other information in the Answer Booklet except in the specified place. In case, it is found any information in the sheets of the answer scripts such answer scripts will not be considered for evaluation.
5. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಲ್ಲಿ ಹಾಗೂ ಪರೀಕ್ಷಾ ಸೂಚನೆಗಳನ್ನು ಉಲ್ಲಂಘಿಸಿದ್ದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಪರೀಕ್ಷಾ ನಿಯಮಾನುಸಾರ ಶಿಸ್ತು ಕ್ರಮಕ್ಕೆ ಗುರಿಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಯ ಉತ್ತರ-ಪುಸ್ತಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.
   Candidate found to be indulging in malpractice during examination and violating examination instructions, action will be taken against such candidate as per the examination rules and his / her Answer Booklet will not be considered for evaluation.
6. ಉತ್ತರ ಬರೆಯಲು ಕಪ್ಪು / ನೀಲಿ ಶಾಯಿಯ ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸತಕ್ಕದ್ದು.
   Use black / blue ball point pen only to write the answers.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**



institutes.aglasem.com
aglasem.com

## ಭಾಗ – I

**ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ : 1 × 10 = 10**

1. ಕನ್ನಡದಲ್ಲಿರುವ 4 ಪ್ರಮುಖ ಪ್ರಾದೇಶಿಕ ಭಾಷೆಗಳು
   (A) ಗುಲ್ಬರ್ಗ ಕನ್ನಡ, ಮಂಗಳೂರು ಕನ್ನಡ, ಬೆಳಗಾವಿ ಕನ್ನಡ, ಮೈಸೂರು ಕನ್ನಡ
   (B) ಮಂಗಳೂರು ಕನ್ನಡ, ಮೈಸೂರು ಕನ್ನಡ, ಧಾರವಾಡ ಕನ್ನಡ, ಕಲ್ಬುರ್ಗಿ ಕನ್ನಡ
   (C) ಕಲ್ಬುರ್ಗಿ ಕನ್ನಡ, ಮೈಸೂರು ಕನ್ನಡ, ಬಿಜಾಪುರ ಕನ್ನಡ, ಧಾರವಾಡ ಕನ್ನಡ
   (D) ಮೈಸೂರು ಕನ್ನಡ, ಮಂಗಳೂರು ಕನ್ನಡ, ಬೆಳಗಾವಿ ಕನ್ನಡ, ಧಾರವಾಡ ಕನ್ನಡ

2. ಭಾಷೆಯನ್ನು ಬಳಕೆಯ ಮೂಲಕ ಮಾತ್ರ ಗಳಿಸಲು ಸಾಧ್ಯ ಎಂದವರು
   (A) ವೈಗಾಟ್ಸ್ಕಿ (B) ಸ್ಕಿನ್ನರ್
   (C) ಬ್ರೂನರ್ (D) ಪಾವೆಲೋ

3. ಕರ್ನಾಟಕ ರಾಜ್ಯ ಪ್ರಮಾಣಿಸಿದ ಭಾಷೆ
   (A) ಗ್ರಾಮ್ಯ ಕನ್ನಡ (B) ಪೇಟೆ ಕನ್ನಡ
   (C) ಹಳ್ಳಿಗಾಡಿನ ಕನ್ನಡ (D) ಗ್ರಾಂಥಿಕ ಕನ್ನಡ

4. ಭಾಷೆ ಸಂವಹನ ಮಾಧ್ಯಮ ಆಗಿರುವಷ್ಟೇ .................. ಕಟ್ಟಿಕೊಳ್ಳುವ ಸಾಧನವಾಗಿದೆ.
   (A) ಚಿಂತನೆ (B) ದುರಾಲೋಚನೆ
   (C) ವ್ಯಕ್ತಿತ್ವ (D) ಕೌಶಲ

5. ಓದಿಗೆ ಬೇಕಾದ ಮೊದಲ ಸಿದ್ಧತೆ
   I. ಕಾಪಿ ಪುಸ್ತಕದಲ್ಲಿ ನಕಲು ಮಾಡಿಸುವುದು
   II. ಹೊಸ ಪದಗಳ ಪರಿಚಯ
   III. ಪುಟ್ಟ ಪುಟ್ಟ ಕಥೆಗಳನ್ನು ಬರೆಸುವುದು
   IV. ಮೌಖಿಕ ಕೌಶಲಗಳಲ್ಲಿ ಪ್ರೌಢಿಮೆ

   *ಇವುಗಳಲ್ಲಿ :*
   (A) I ಮತ್ತು II ಮಾತ್ರ ಸರಿ (B) I ಮತ್ತು III ಮಾತ್ರ ಸರಿ
   (C) III ಮತ್ತು IV ಮಾತ್ರ ಸರಿ (D) II ಮತ್ತು IV ಮಾತ್ರ ಸರಿ



institutes.aglasem.com
aglasem.com

6. ಕಿರಿಯ ಪ್ರಾಥಮಿಕ ಹಂತದಲ್ಲಿ ಕಾಪಿ ಬರೆಸುವುದರ ಪ್ರಮುಖ ಉದ್ದೇಶ

   I. ಯಾಂತ್ರಿಕ ಚಟುವಟಿಕೆಯನ್ನು ಬೆಳೆಸುವುದು

   II. ಅಕ್ಷರಗಳ ಗಾತ್ರ ಕುರಿತಂತೆ ಸರಿಯಾದ ಕಲ್ಪನೆ ಮೂಡಿಸುವುದು

   III. ಕೈಗಳಿಗೆ ವ್ಯಾಯಾಮ ಕೊಡುವುದು

   IV. ಭಾಷಾ ಕೌಶಲಗಳನ್ನು ಅಭಿವೃದ್ಧಿಪಡಿಸುವುದು

   *ಇವುಗಳಲ್ಲಿ :*

   (A) I ಮತ್ತು IV ಮಾತ್ರ ಸರಿ (B) I ಮತ್ತು II ಮಾತ್ರ ಸರಿ

   (C) II ಮತ್ತು III ಮಾತ್ರ ಸರಿ (D) II ಮತ್ತು IV ಮಾತ್ರ ಸರಿ

7. ಇವುಗಳಲ್ಲಿ ಯಾವುದು ಭಾಷಾ ತರಗತಿಯ ಮೂಲ ಸಂಪನ್ಮೂಲ

   (A) ಶ್ರವ್ಯಾತ್ಮಕ (B) ಪ್ರಕೃತಿ

   (C) ದೃಶ್ಯಾತ್ಮಕ (D) ತಾಂತ್ರಿಕತೆ

8. ಒಳಗೊಳ್ಳುವ ತರಗತಿಯಲ್ಲಿ ಶಿಕ್ಷಕರ ಮಾತು

   (A) ಯಾರನ್ನೂ ಪ್ರತ್ಯೇಕಿಸುವುದಿಲ್ಲ (B) ಯಾರನ್ನೂ ಒಳಗೊಳ್ಳುವುದಿಲ್ಲ

   (C) ಎಲ್ಲರನ್ನೂ ಸಾಮಾನ್ಯೀಕರಿಸುತ್ತದೆ (D) ಯಾರನ್ನೂ ಗುರುತಿಸುವುದಿಲ್ಲ

9. ಒಳಗೊಳ್ಳುವ ತರಗತಿಯಲ್ಲಿ ಯಾವ ರೀತಿಯ ವಿದ್ಯಾರ್ಥಿಗಳಿರುವರು ?

   (A) ಪ್ರತಿಭಾವಂತರು

   (B) ಮಂದಗತಿಯಲ್ಲಿ ಕಲಿಯುವವರು

   (C) ದೃಷ್ಟಿದೋಷ ಹಾಗೂ ಶ್ರವಣ ದೋಷವುಳ್ಳವರು

   (D) ಮೇಲಿನ ಎಲ್ಲರೂ

10. ಕೆಳಗಿನವುಗಳಲ್ಲಿ ಯಾವುದು ಶ್ರವಣ ದೋಷ ಇರುವ ವಿದ್ಯಾರ್ಥಿಗಳನ್ನು ಅನುಕೂಲಿಸುವ ವಿಧಾನ

   (A) ತರಗತಿಯಲ್ಲಿ ಭೂತಗನ್ನಡಿ ಬಳಕೆ

   (B) ಆಂಗಿಕ ಚಲನೆ ಮೂಲಕ ಸೂಚನೆ ನೀಡುವುದು

   (C) ಕಪ್ಪುಹಲಗೆ ಬರವಣಿಗೆ ದೊಡ್ಡದಾಗಿರಬೇಕು

   (D) ಚಿತ್ರಗಳ ಮೂಲಕ ವಿವರಣೆ



institutes.aglasem.com
aglasem.com

## ಭಾಗ – II

**ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ : 2 × 5 = 10**

11. ಭಾಷಾ ಶಿಕ್ಷಣದಲ್ಲಿ ಸಾಹಿತ್ಯಕ್ಕೆ ಮಹತ್ವ ನೀಡಬೇಕು. ಏಕೆ ?

12. ಕಥೆ ಹೇಳುವುದರ ಪ್ರಯೋಜನಗಳನ್ನು ಪಟ್ಟಿಮಾಡಿ.

13. ಹುಡುಗಾಟ ಹುಡುಕಾಟವಾಗುವುದು ಯಾವಾಗ ? ಏಕೆ ?

14. ಯುನೆಸ್ಕೊ ಪ್ರಕಾರ ಸಾಕ್ಷರತೆ ಎಂದರೇನು ?

15. ಭಾಷಾ ತರಗತಿಯಲ್ಲಿ ಮಿಂಚುಪಟ್ಟಿ ಬಳಕೆಯ ಸಾಧ್ಯತೆಗಳನ್ನು ಚರ್ಚಿಸಿ.

16. ನಿಮ್ಮ ತರಗತಿಯಲ್ಲಿ ಮಗುವಿನ ಮಾತನ್ನು ಸಂಪನ್ಮೂಲವಾಗಿ ಬಳಸುವ ಎರಡು ಸನ್ನಿವೇಶಗಳನ್ನು ಬರೆಯಿರಿ.

17. ಈ ಕೆಳಗಿನ ಮಾದರಿಯಲ್ಲಿರುವಂತೆ ಎರಡು ಭಾಷಾ ಆಟಗಳನ್ನು ರಚಿಸಿ. (ಎರಡು ಅಥವಾ ಮೂರು ಅಕ್ಷರವಿರಲಿ).




18. ಒಳಗೊಳ್ಳುವ ತರಗತಿಯ ಯಾವುದಾದರೂ 4 ಲಕ್ಷಣಗಳನ್ನು ಬರೆಯಿರಿ.

## ಭಾಗ – III

**ಈ ಕೆಳಗಿನ ಪ್ರತಿ ಪ್ರಶ್ನೆಗೂ 'ಅ' ಅಥವಾ 'ಆ' ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟ ಮೀರದಂತೆ ಉತ್ತರಿಸಿ : 5 × 8 = 40**

19. ಅ) ಓದುವ ಕೌಶಲದ ಉಪಕೌಶಲಗಳನ್ನು ಪಟ್ಟಿಮಾಡಿ ಹಾಗೂ ಅವರು ಓದಿದ್ದನ್ನು ಅರ್ಥೈಸಿಕೊಂಡಿದ್ದಾರೆಯೇ ಎಂದು ತಿಳಿಯಲು ನೀವು ಯಾವ ಯಾವ ಚಟುವಟಿಕೆಗಳನ್ನು ನೀಡುವಿರಿ ಉದಾಹರಿಸಿ.

**ಅಥವಾ**

ಆ) ಬರವಣಿಗೆ ಕೌಶಲವನ್ನು ಅನುಕೂಲಿಸುವ ನಿಟ್ಟಿನಲ್ಲಿ ನೀವು ಅನುಸರಿಸುವ ಚಟುವಟಿಕೆಗಳನ್ನು ಉದಾಹರಣೆ ಸಹಿತ ವಿವರಿಸಿ.



institutes.aglasem.com
aglasem.com

20. ಅ) ಪ್ರಾಥಮಿಕ ಹಂತದಲ್ಲಿ ಆಲಿಸುವಿಕೆ ಹಾಗೂ ಮೌಖಿಕ ಅಭಿವ್ಯಕ್ತಿಯಲ್ಲಿ ಎದುರಾಗುವ ಸಮಸ್ಯೆಗಳಾವುವು ? ಸಂಕ್ಷಿಪ್ತವಾಗಿ ವಿವರಿಸಿ.

**ಅಥವಾ**

ಆ) ಮಕ್ಕಳಿಂದ ಕಥೆ ಹೇಳಿಸುವಾಗ ಶಿಕ್ಷಕರು ಮಾಡಿಕೊಳ್ಳಬೇಕಾದ ತಯಾರಿಯನ್ನು ಸಂಕ್ಷಿಪ್ತವಾಗಿ ವಿವರಿಸಿ.

21. ಅ) ನಿಮ್ಮ ತರಗತಿಯಲ್ಲಿ ಭಾಷಾ ಕಲಿಕೆಯನ್ನು ಅನುಕೂಲಿಸುವಾಗ ಪದಗೋಡೆಯನ್ನು ಹೇಗೆ ರಚಿಸುವಿರಿ ಎಂಬುದನ್ನು ಉದಾಹರಣೆ ಸಹಿತ ವಿವರಿಸಿ.

**ಅಥವಾ**

ಆ) ಭಾಷಾ ಶಿಕ್ಷಕರಾಗಿ ನೀವು ಶಾಲಾ ಭಾಷೆಗೆ ಮಗುವನ್ನು ಹೊಂದಿಕೊಳ್ಳುವಂತೆ ಮಾಡಲು ತೆಗೆದುಕೊಳ್ಳುವ ಕ್ರಮಗಳಾವುವು ?

22. ಅ) ಒಳಗೊಳ್ಳುವ ತರಗತಿಯಲ್ಲಿ ದೊಡ್ಡ ಪುಸ್ತಕ ಹಾಗೂ ಒಗಟಿನ ಕಾರ್ಡ್‌ಗಳನ್ನು ಬಳಸಿ ಎಲ್ಲಾ ಮಕ್ಕಳು ಒಳಗೊಳ್ಳುವಂತೆ ಮಾಡಲು ನೀವು ತೆಗೆದುಕೊಳ್ಳಬಹುದಾದ ಮಾರ್ಗೋಪಾಯಗಳಾವುವು ?

**ಅಥವಾ**

ಆ) ಶ್ರವಣದೋಷ ಹಾಗೂ ದೃಷ್ಟಿದೋಷ ಇರುವ ವಿದ್ಯಾರ್ಥಿಗಳ ಕಲಿಕೆಯನ್ನು ಅನುಕೂಲಿಸುವಲ್ಲಿ ಎದುರಾಗುವ ಸಮಸ್ಯೆಗಳಾವುವು ? ಹಾಗೂ ಪರಿಹಾರಗಳಾವುವು ?

23. ಅ) ಓದುವ ಚಟುವಟಿಕೆ ಹಮ್ಮಿಕೊಳ್ಳುವ ಮೊದಲು ಅನುಸರಿಸಬೇಕಾದ ಪೂರ್ವಸಿದ್ಧತೆಗಳನ್ನು ಉದಾಹರಣೆಯೊಂದಿಗೆ ಬರೆಯಿರಿ.

**ಅಥವಾ**

ಆ) ಓದುವಿಕೆಯನ್ನು ಅನುಕೂಲಿಸುವ ಚಟುವಟಿಕೆಗಳನ್ನು ಉದಾಹರಣೆಯೊಂದಿಗೆ ವಿವರಿಸಿ.

24. ಅ) ಭಾಷಾ ಸಂಪನ್ಮೂಲಗಳ ಮನೋನಕ್ಷೆಯನ್ನು ಬಿಡಿಸಿ ಪ್ರತಿಯೊಂದಕ್ಕೂ ಒಂದೊಂದು ಉದಾಹರಣೆ ಕೊಡಿ.

**ಅಥವಾ**

ಆ) ನೀವು ಗಮನಿಸಿದಂತೆ ನಲಿ-ಕಲಿ ವಾತಾವರಣವನ್ನು ಸಂಕ್ಷಿಪ್ತವಾಗಿ ವಿವರಿಸಿ.

25. ಅ) ಮಂದಗತಿಯಲ್ಲಿ ಕಲಿಯುವವರ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

**ಅಥವಾ**

ಆ) ಒಳಗೊಳ್ಳುವಿಕೆ ಎಂದರೇನು ? ಒಳಗೊಳ್ಳುವ ತರಗತಿಯ ಶಿಕ್ಷಕರ ಭಾಷೆ ಹೇಗಿರಬೇಕು ? ವಿವರಿಸಿ.



institutes.aglasem.com
aglasem.com

26. ಅ) ಈ ಕೆಳಗಿನ ಪದ್ಯವನ್ನು ಸಂಭಾಷಣೆ ರೂಪಕ್ಕೆ ರೂಪಾಂತರಿಸಿ ಬರೆಯಿರಿ :

ಪುಣ್ಯಕೋಟಿ ಎಂಬ ಹಸುವು
ತನ್ನ ಕಂದನ ನೆನೆದುಕೊಂಡು
ಮುನ್ನ ಹಾಲನು ಕೊಡುವೆನೆನುತ
ಚಂದದಿ ತಾ ಬರುತಿರೆ

ಇಂದೆನೆಗೆ ಆಹಾರ ಸಿಕ್ಕಿತು
ಎಂದು ಬೇಗನೆ ದುಷ್ಟವ್ಯಾಘ್ರನು
ಬಂದು ಬಳಸಿ ಅಡ್ಡಗಟ್ಟಿ
ನಿಂದನಾ ಹುಲಿರಾಯನು

ಮೇಲೆ ಬಿದ್ದು ನಿನ್ನನೀಗಲೆ
ಬೀಳಹೊಯ್ವೆನು ನಿನ್ನ ಹೊಟ್ಟೆಯು
ಸೀಳಿಬಿಡುವೆನು ಎನುತ ಕೋಪದಿ
ಖೂಳ ವ್ಯಾಘ್ರನು ಕೂಗಲು

ಒಂದು ಬಿನ್ನಹ ಹುಲಿಯೆ ಕೇಳು
ಕಂದನಿರುವನು ದೊಡ್ಡಿಯೊಳಗೆ
ಒಂದು ನಿಮಿಷದಿ ಮೊಲೆಯ ಕೊಟ್ಟು
ಬಂದು ಸೇರುವೆನ್ನಿಲ್ಲಿಗೆ

ಹಸಿದ ವೇಳೆಗೆ ಸಿಕ್ಕಿದೊಡವೆಯ
ವಶವ ಮಾಡದೆ ಬಿಡಲು ನೀನು
ನುಸುಳಿ ಹೋಗುವೆ ಮತ್ತೆ ಬರುವೆಯ
ಹುಸಿಯನಾಡುವೆ ಎಂದಿತು

ಕೊಂದು ತಿನ್ನುವೆನೆಂಬ ಹುಲಿಗೆ
ಚಂದದಿಂದ ಭಾಷೆ ಇತ್ತು
ಕಂದ ನಿನ್ನನು ನೋಡಿ ಹೋಗುವೆ
ನೆಂದು ಬಂದೆನು ದೊಡ್ಡಿಗೆ

ಆರ ಮೊಲೆಯನು ಕುಡಿಯಲಮ್ಮ
ಆರ ಸೇರಿ ಬರುದಕಲಮ್ಮ
ಆರ ಬಳಿಯಲಿ ಮಲಗಲಮ್ಮ
ಆರು ನನಗೆ ಹಿತವರು ?

**ಅಥವಾ**



institutes.aglasem.com
aglasem.com

ಆ) ಈ ಕೆಳಗಿನ ಪದ್ಯವನ್ನು ಅದರ ಆಶಯಕ್ಕೆ ದಕ್ಕೆಯಾಗದಂತೆ ಗದ್ಯರೂಪಕ್ಕೆ ರೂಪಾಂತರಿಸಿ :

ಕಳಬೇಡ, ಕೊಲಬೇಡ ಹುಸಿಯ ನುಡಿಯಲು ಬೇಡ,

ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,

ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,

ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ

ಇದೇ ನಮ್ಮ ಕೂಡಲ ಸಂಗಮದೇವನೊಲಿಸುವ ಪರಿ

– ಬಸವಣ್ಣ

ಬೆಟ್ಟದ ಮೇಲೊಂದು ಮನೆಯ ಮಾಡಿ

ಮೃಗಗಳಿಗಂಜಿದಡೆಂತಯ್ಯಾ ?

ಸಮುದ್ರದ ತಡಿಯಲ್ಲೊಂದು ಮನೆಯ ಮಾಡಿ

ನೊರೆತೊರೆಗಳಿಗಂಜಿದಡೆಂತಯ್ಯಾ ?

ಸಂತೆಯೊಳಗೊಂದು ಮನೆಯ ಮಾಡಿ

ಶಬ್ದಕ್ಕೆ ನಾಚಿದಡೆಂತಯ್ಯಾ ?

ಚನ್ನಮಲ್ಲಿಕಾರ್ಜುನ ದೇವ ಕೇಳಯ್ಯಾ

ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ

ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು



institutes.aglasem.com
aglasem.com

DO NOT WRITE ANYTHING HERE



institutes.aglasem.com

aglasem.com

# Answer Key

institutes.aglasem.com
aglasem.com

# ಮಾದರಿ ಉತ್ತರಗಳು
# MODEL ANSWERS

ಸಂಕೇತ ಸಂಖ್ಯೆ : **304-K**

**Code No. : 304-K**

## ಡಿ.ಎಲ್.ಇಡಿ. ಪ್ರಥಮ ವರ್ಷ
## D.El.Ed. FIRST YEAR
## ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ.)
## ಪ್ರಥಮ ಭಾಷೆ – ಕನ್ನಡ
## FACILITATING LEARNING ( LPS )
## FIRST LANGUAGE — KANNADA

ದಿನಾಂಕ : 06. 07. 2022 ] [ ಗರಿಷ್ಠ ಅಂಕಗಳು : 60

Date : 06. 07. 2022 ] [ Max. Marks : 60

### ಭಾಗ – I

**ಬಹು-ಆಯ್ಕೆಯ ಉತ್ತರಗಳು : (ಪ್ರತಿಯೊಂದು ಸರಿ ಉತ್ತರಕ್ಕೆ ಒಂದೊಂದು ಅಂಕದಂತೆ)**

**1 × 10 = 10**

1. (B) ಮಂಗಳೂರು ಕನ್ನಡ, ಮೈಸೂರು ಕನ್ನಡ, ಧಾರವಾಡ ಕನ್ನಡ, ಕಲ್ಬುರ್ಗಿ ಕನ್ನಡ
2. (C) ಬ್ರೂನರ್
3. (D) ಗ್ರಾಂಥಿಕ ಕನ್ನಡ
4. (C) ವ್ಯಕ್ತಿತ್ವ
5. (D) II ಮತ್ತು IV ಮಾತ್ರ ಸರಿ
6. (C) II ಮತ್ತು III ಮಾತ್ರ ಸರಿ
7. (B) ಪ್ರಕೃತಿ
8. (A) ಯಾರನ್ನೂ ಪ್ರತ್ಯೇಕಿಸುವುದಿಲ್ಲ
9. (D) ಮೇಲಿನ ಎಲ್ಲರೂ
10. (B) ಆಂಗಿಕ ಚಲನೆ ಮೂಲಕ ಸೂಚನೆ ನೀಡುವುದು



institutes.aglasem.com
aglasem.com

## ಭಾಗ – II

**ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ: 2 × 5 = 10**

11. ಭಾಷಾ ಶಿಕ್ಷಣದಲ್ಲಿ ಸಾಹಿತ್ಯಕ್ಕೆ ಮಹತ್ವ ನೀಡಬೇಕು. ಏಕೆಂದರೆ,

ಸಾಹಿತ್ಯದಲ್ಲಿ ಭಾಷೆ ಪಕ್ವವಾಗಿರುತ್ತದೆ. ಒಬ್ಬ ಶಿಲ್ಪಿಯು ಕಲ್ಲಿಗೆ ರೂಪಕೊಡುವಂತೆ ಸಾಹಿತಿಗಳು ಭಾಷೆಯ ಆಳ ಅಗಲಗಳನ್ನು ಸುತ್ತಿ, ಶಬ್ದ-ಶಬ್ದಗಳನ್ನು ಹಿಡಿದು ಅಲ್ಲಾಡಿಸಿ ಒರೆಗೆ ಹಚ್ಚಿ ತಮ್ಮ ಒಳಗಿನ ಭಾವನೆಗಳನ್ನು ಚಿಂತನೆಗಳನ್ನು ವ್ಯಕ್ತಪಡಿಸಲು ತಕ್ಕ ಪ್ರತಿಮೆಗಳನ್ನು ಹುಡುಕಿ ಓದುವವರ / ಕೇಳುವವರ ಮುಂದಿಡುತ್ತಾರೆ. ಈ ರೀತಿ ಪಕ್ವವಾಗಿರುವ ಭಾಷೆ ಸಾಹಿತ್ಯದಲ್ಲಿರುತ್ತದೆ. ಸಾಹಿತ್ಯದ ವಿವಿಧ ಪ್ರಕಾರಗಳ ಮೂಲಕ ಸಂಪೂರ್ಣ ವ್ಯಕ್ತಿತ್ವ ವಿಕಾಸಕ್ಕೆ ದಾರಿಗಳು ದೊರೆಯುತ್ತವೆ.

***ಸೂಚನೆ :*** ವಿದ್ಯಾರ್ಥಿಗಳ ಉತ್ತರವನ್ನು ಗಮನಿಸಿ ಅಂಕಗಳನ್ನು ನೀಡುವುದು.

12. ***ಕಥೆ ಹೇಳುವುದರ ಐದು ಪ್ರಯೋಜನಗಳೆಂದರೆ:***

* ಆಲಿಸಿದ ವಿಚಾರಗಳನ್ನು, ಕಥೆಗಳನ್ನು ಮಗು ಅರ್ಥೈಸಿಕೊಂಡಿದೆ ಎನ್ನುವುದನ್ನು ತೋರಿಸುತ್ತದೆ.
* ಮಗು ತನಗೆ ಅರ್ಥವಾದ ವಿಷಯಗಳನ್ನು ತನ್ನದೇ ಭಾಷೆಯಲ್ಲಿ ಹೇಳಲು ಕಲಿಯುತ್ತದೆ.
* ಭಾವನೆಗಳನ್ನು ಸಂದರ್ಭೋಚಿತವಾಗಿ ಅಭಿವ್ಯಕ್ತಿಸಲು ಅವಕಾಶಗಳು ಸಿಗುತ್ತವೆ.
* ಮಕ್ಕಳ ಭಾವನೆ ವಿಚಾರಗಳಿಗೆ ಮುಕ್ತ ಅಭಿವ್ಯಕ್ತಿ ದೊರೆಯುತ್ತದೆ.
* ಮಗುವಿನ ಆತ್ಮವಿಶ್ವಾಸ ಹೆಚ್ಚಿಸುತ್ತದೆ.

***ಸೂಚನೆ :*** ಕನಿಷ್ಠ 4 ಅಂಶಗಳಿದ್ದರೆ 2 ಅಂಕಗಳನ್ನು ನೀಡುವುದು.

13. ಹುಡುಗಾಟ ಹುಡುಕಾಟವಾಗುವುದು ಸೋಲು ಎದುರಾದಾಗ, ಪಂಥಾಹ್ವಾನಗಳು ಎದುರಾದಾಗ ಬಾಲ್ಯದ ಆಟಗಳು ಇವನ್ನು ಸಹಜವಾಗಿಯೇ ನೀಡುತ್ತವೆ.

ಯಾವುದೇ ಆಟಕ್ಕಾದರೂ ಒಂದಷ್ಟು ನಿಯಮಗಳಿರುತ್ತವೆ, ಅದರದ್ದೇ ಆದ ಪರಿಭಾಷೆಗಳಿರುತ್ತವೆ. ಅದರದ್ದೇ ಆದ ನಿರೀಕ್ಷೆಗಳಿರುತ್ತವೆ. ಹಾಗೂ ಕೊನೆಯಲ್ಲಿ ಅದರದ್ದೇ ಆದ ಮೌಲ್ಯಮಾಪನವೂ ಇರುತ್ತದೆ. ಜೊತೆಗೆ ಆಟದಲ್ಲಿ ಸೋತಾಗ ಸ್ವ-ವಿಮರ್ಶೆ ಇರುತ್ತದೆ. ಗೆದ್ದಾಗ ಗೆದ್ದ ಅಂಶಗಳನ್ನು ಮೆಲುಕು ಹಾಕುವುದೂ ಇರುತ್ತದೆ.

***ಸೂಚನೆ :*** ಮಕ್ಕಳ ಅಭಿವ್ಯಕ್ತಿ ಗಮನಿಸಿ ಅಂಕಗಳನ್ನು ನೀಡುವುದು.

14. ಯುನೆಸ್ಕೊ ಪ್ರಕಾರ ಸಾಕ್ಷರತೆ ಎಂದರೆ ಬದಲಾಗುತ್ತಿರುವ ಸಂದರ್ಭಕ್ಕೆ ತಕ್ಕಂತೆ ಮುದ್ರಿತ ಹಾಗೂ ಲಿಖಿತ ಸಾಮಗ್ರಿಗಳನ್ನು ಗುರುತಿಸಿ, ಅರ್ಥೈಸಿಕೊಂಡು, ವಿವರಿಸಲು, ಸಂವಹಿಸಲು ಮತ್ತು ಲೆಕ್ಕಾಚಾರ



institutes.aglasem.com

aglasem.com

ಮಾಡಬಲ್ಲ ಸಾಮರ್ಥ್ಯವನ್ನು ಸಾಕ್ಷರತೆ ಎಂದು ಕರೆಯಬಹುದು. ಜೊತೆಗೆ ತನ್ನ ಗುರಿ, ಉದ್ದೇಶಗಳನ್ನು ತಲುಪಲು, ಜ್ಞಾನ ಗಳಿಸಿಕೊಳ್ಳಲು, ವಿಶಾಲ ಸಮಾಜದಲ್ಲಿ ಮತ್ತು ಸಮುದಾಯದಲ್ಲಿ ಸಂಪೂರ್ಣವಾಗಿ ತೊಡಗಿಕೊಳ್ಳಲು ಅವಶ್ಯವಾದ ನಿರಂತರ ಕಲಿಕೆಯನ್ನು ಸಾಕ್ಷರತೆ ಎನ್ನಬಹುದು.

15. ***ಭಾಷಾ ತರಗತಿಯಲ್ಲಿ ಮಿಂಚುಪಟ್ಟಿ ಬಳಕೆ ತುಂಬಾ ಉಪಯುಕ್ತವಾಗಿದೆ :***

- ಮಕ್ಕಳು ಓದಲು ಅಭ್ಯಾಸ ಮಾಡಬೇಕಾಗಿರುವ ಪದಗಳನ್ನು ಮಿಂಚುಪಟ್ಟಿಯಲ್ಲಿ ಬರೆಯಬೇಕು.
- ಮಿಂಚುಪಟ್ಟಿಗಳನ್ನು ಮಕ್ಕಳ ಎದುರು ಕೆಲವು ಕ್ಷಣಗಳಷ್ಟು ಮಾತ್ರ ಪ್ರದರ್ಶಿಸಬೇಕು.
- ಅಭ್ಯಾಸವಾದಂತೆ ಪ್ರದರ್ಶನ ಸಮಯವನ್ನು ಕಡಿಮೆ ಮಾಡಬೇಕು.
- ಮಿಂಚುಪಟ್ಟಿಯ ಪ್ರಮುಖ ಲಾಭವೆಂದರೆ ಮಕ್ಕಳು ಪದಗಳನ್ನು ಇಡಿಯಾಗಿ ಗ್ರಹಿಸುವರು.
- ಇದರಿಂದ ಅಕ್ಷರಗಳನ್ನು ಜೋಡಿಸಿ ಓದದೇ ಇಡಿಯಾಗಿ ನೇರವಾಗಿ ಓದಲು ಸಾಧ್ಯವಾಗುತ್ತದೆ.

***ಸೂಚನೆ :*** ಕನಿಷ್ಠ 4 ಅಂಶಗಳಿದ್ದರೆ 2 ಅಂಕಗಳನ್ನು ನೀಡುವುದು.

16. ***ಮಗುವಿನ ಮಾತನ್ನು ಸಂಪನ್ಮೂಲವಾಗಿ ಬಳಸುವ ಎರಡು ಸನ್ನಿವೇಶಗಳೆಂದರೆ:***

- ಮಗುವಿನ ಅನುಭವ : ಮಕ್ಕಳಿಗೆ ಮಾತನಾಡಲು ಅವರ ಅನುಭವ ಹಂಚಿಕೊಳ್ಳಲು ಅವಕಾಶ ಕೊಡುವುದು. ಸಾಕ್ಷರತೆಗೆ ಸಹಾಯಕವಾಗುತ್ತದೆ. ಮಗು ತನ್ನ ಹಾಗೂ ಇನ್ನೊಬ್ಬರಿಗಾದ ಅನುಭವವನ್ನು ಹಂಚಿಕೊಂಡಾಗಲೆಲ್ಲ ಅದು ತನ್ನ ಅನನ್ಯ ಭಾವವನ್ನು ತನ್ನ ದೃಷ್ಟಿಕೋನವನ್ನು ಅರ್ಥ ಮಾಡಿಕೊಳ್ಳುತ್ತಾ ಹಂಚಿಕೊಳ್ಳುತ್ತಿರುತ್ತಾರೆ.
- ಮಕ್ಕಳು ಹೇಳುವ ಕಥೆಗಳು : ಕಥೆಗಳು ಒಂದೊಂದು ವಯಸ್ಸಿನ ಮಕ್ಕಳು ಪ್ರಪಂಚವನ್ನು ಹೇಗೆ ಅರ್ಥೈಸಿಕೊಂಡಿದ್ದಾರೆ ಎಂದೂ ಮತ್ತು ಹೇಳುತ್ತಿರುವ ಭಾವನೆಗಳು ಮತ್ತು ಚಿಂತನೆಗಳು ಏನು ಎನ್ನುವುದನ್ನು ತಿಳಿಸುತ್ತದೆ.

17. ***ಮಾದರಿ :***




***ಸೂಚನೆ :*** ಈ ಮೇಲಿನ ಮಾದರಿಯಂತೆ ಎರಡು ಭಾಷಾ ಆಟಗಳನ್ನು ಬರೆದಿದ್ದರೆ ತಲಾ ಒಂದರಂತೆ 2 ಅಂಕಗಳನ್ನು ನೀಡುವುದು.


institutes.aglasem.com
aglasem.com

18. ***ಒಳಗೊಳ್ಳುವ ತರಗತಿಯ ಲಕ್ಷಣಗಳೆಂದರೆ:***

* ✳ ಪ್ರತಿ ಮಗುವನ್ನು ಒಬ್ಬ ವ್ಯಕ್ತಿಯಾಗಿ ಪರಿಗಣಿಸಿ ಆ ಮಗುವಿಗೆ ಸೂಕ್ತ ಗೌರವ ನೀಡಬೇಕು.
* ✳ ತರಗತಿಯ ಆಚರಣೆಗಳ ಕೇಂದ್ರ, ವಿದ್ಯಾರ್ಥಿಗಳೇ ಆಗಿರುವುದರಿಂದ ಅಗತ್ಯತೆಗಳ ಮಾಹಿತಿ ಅನಿಸಿಕೆಗಳ ಮೇಲೆ ಅವಲಂಬಿತವಾಗಿರದೇ ಔಪಚಾರಿಕ ಮತ್ತು ಅನೌಪಚಾರಿಕ ಮೌಲ್ಯಾಂಕನದ ಮೂಲಕ ದೊರೆಯುವ ಚಿತ್ರಣವನ್ನು ಅವಲಂಬಿಸಿರುತ್ತದೆ.
* ✳ ಎಲ್ಲಾ ಕಲಿಕಾ ಪರಿಸರವು ಪ್ರತೀ ಮಗುವೂ ತನ್ನ ವೈಯಕ್ತಿಕ ಸಾಮರ್ಥ್ಯಕ್ಕನುಗುಣವಾಗಿ ಕಲಿಯುವ ರೀತಿಯಲ್ಲಿ ರೂಪಿತವಾಗಿರಬೇಕು.
* ✳ ಮಕ್ಕಳ ಕಲಿಕೆಯ ಮಾಪನದಲ್ಲಿ ವೈವಿಧ್ಯತೆ ಇರಬೇಕು. ಅದು ಸೂಕ್ತವಾಗಿಯೂ, ವಿಶ್ವಾಸಾರ್ಹವಾಗಿಯೂ ಇರಬೇಕು.
* ✳ ಬೋಧನಾ ಕಲಿಕಾ ಪ್ರಕ್ರಿಯೆಗೆ ಸೂಕ್ತ ಹಿಮ್ಮಾಹಿತಿ ಸಿಗಲು ಅನುಕೂಲವಾಗುವಂತೆ ಸಮಯ ಮತ್ತು ಗತಿಯನ್ನು ಯೋಜಿಸಬೇಕು.
* ✳ ಸಮುದಾಯ ಮತ್ತು ಪೋಷಕರನ್ನು ಶಾಲೆಯಲ್ಲಿ ಸೂಕ್ತ ರೀತಿಯಲ್ಲಿ ತೊಡಗಿಸಬೇಕು.
* ✳ ಮಕ್ಕಳು ತಮ್ಮ ಜೀವನ, ಜೀವನದ ಕಲಿಕೆ, ಶಾಲಾ ಕಲಿಕೆ ಇವೆರಡರ ಅನುಭವವಾಗಬೇಕು.

***ಸೂಚನೆ :*** ಕನಿಷ್ಠ 4 ಅಂಶಗಳಿದ್ದರೆ 2 ಅಂಕಗಳನ್ನು ನೀಡುವುದು.

## ಭಾಗ – III

**ಈ ಕೆಳಗಿನ ಪ್ರತಿ ಪ್ರಶ್ನೆಗೂ 'ಅ' ಅಥವಾ 'ಆ' ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟ ಮೀರದಂತೆ ಉತ್ತರಿಸಿ : 5 × 8 = 40**

19. ಅ) ***ಓದುವ ಕೌಶಲ ಒಳಗೊಳ್ಳುವ ಉಪಕೌಶಲಗಳು ಕೆಳಗಿನಂತಿವೆ:***

* ✳ ಅಕ್ಷರಗಳನ್ನು ಪದಗಳನ್ನು ಗುರುತಿಸುವುದು.
* ✳ ಗುರುತಿಸಿದ ಅಕ್ಷರ, ಪದಗಳನ್ನು ಗಟ್ಟಿಯಾಗಿ ಓದುವುದು.
* ✳ ಪದ, ಪದಗುಚ್ಛ ವಾಕ್ಯಗಳನ್ನು ಗಟ್ಟಿಯಾಗಿ ಓದುವುದು.
* ✳ ಪಠ್ಯವನ್ನು ಮೌನವಾಗಿ ನೋಡಿ ಅರ್ಥಮಾಡಿಕೊಳ್ಳುವುದು.
* ✳ ಪದಗಳ ಅರ್ಥ ಗ್ರಹಿಸುವುದು.
* ✳ ಓದಿದ ವಾಕ್ಯ, ವಾಕ್ಯ ಗುಚ್ಛಗಳಲ್ಲಿ ಅಡಕವಾಗಿರುವ ಅರ್ಥವನ್ನು ಗ್ರಹಿಸುವುದು.
* ✳ ಹಿಂದಿನ ಅನುಭವಗಳ ಆಧಾರದಲ್ಲಿ ಓದುವ ಪಠ್ಯವನ್ನು ಅರ್ಥೈಸಿಕೊಳ್ಳುವುದು.



institutes.aglasem.com
aglasem.com

* ವಾಕ್ಯ ವಾಕ್ಯಗಳೊಳಗೆ ಇರುವ ಸಂಬಂಧಗಳನ್ನು ಗ್ರಹಿಸಿ ಪಠ್ಯವನ್ನು ಅರ್ಥೈಸಿಕೊಳ್ಳುವುದು.
* ವಿಶೇಷಾರ್ಥ ನೀಡುವ ಬಳಕೆಗಳನ್ನು ಸಾಂದರ್ಭಿಕವಾಗಿ ಅರ್ಥೈಸಿಕೊಳ್ಳುವುದು.
* ಪದಗಳ ಅರ್ಥವನ್ನು ಸಾಂದರ್ಭಿಕವಾಗಿ ಊಹಿಸುವುದು.
* ಓದಿದ ಪಠ್ಯ ನೀಡಿದ ಅರ್ಥವನ್ನು ವಿಮರ್ಶೆಗೊಳಪಡಿಸುತ್ತಾ ಓದಿ ಅರ್ಥೈಸಿಕೊಳ್ಳುವುದು.
* ಪಠ್ಯದಲ್ಲಿರುವ ಅಲಂಕಾರಿಕ ಬಳಕೆಗಳನ್ನು ಅರ್ಥ ಮಾಡಿಕೊಳ್ಳುವುದು.

ಈ ಮೇಲಿನ ಉಪಕೌಶಲಗಳನ್ನು ವಿದ್ಯಾರ್ಥಿಗಳು ತಮ್ಮದಾಗಿಸಿಕೊಂಡಿದ್ದಾರೆಯೇ ಎಂಬುದನ್ನು ತಿಳಿಯಲು ಈ ಕೆಳಗಿನ ಚಟುವಟಿಕೆ ನೀಡಬೇಕು.

* ಓದಿದ ಪಠ್ಯಭಾಗದ ಮೇಲೆ ಪ್ರಶ್ನೆಗಳನ್ನು ಕೇಳಿ ಅವರು ನೀಡುವ ಉತ್ತರಗಳ ಆಧಾರದಲ್ಲಿ ಅರ್ಥೈಸಿಕೊಳ್ಳುವಿಕೆಯನ್ನು ಅಂದಾಜಿಸುವುದು.
* ಪದಗಳ ಅರ್ಥೈಸಿಕೊಳ್ಳುವಿಕೆಯನ್ನು ತಿಳಿಯುವ ಅಭ್ಯಾಸಗಳನ್ನು ನೀಡುವುದು.
* ಓದಿದ ಪಠ್ಯವನ್ನು ಸಾರಾಂಶಿಸಲು ಹೇಳುವುದು.
* ಪದಗಳ ಬದಲಾವಣೆಯಿಂದ ವಾಕ್ಯಗಳು ನೀಡುವ ಅರ್ಥ ಯಾವ ರೀತಿ ಬದಲಾಗುತ್ತದೆ ಎನ್ನುವುದನ್ನು ತಿಳಿಸಲು ಹೇಳುವುದು.
* ಸಾಂದರ್ಭಿಕ ಅರ್ಥಗಳ ಕುರಿತಂತೆ ಪ್ರಶ್ನೆ ಕೇಳುವುದು, ಅಭ್ಯಾಸಗಳನ್ನು ನೀಡುವುದು.
* ಓದಿದ ಪಠ್ಯವನ್ನು ವಿಮರ್ಶಾತ್ಮಕವಾಗಿ ಚರ್ಚಿಸಲು ಅವಕಾಶ ಕೊಡುವುದು.
* ಓದಿದ ಪಠ್ಯದ ಬಗ್ಗೆ ಮುಕ್ತವಾಗಿ ಅವರ ಅಭಿಪ್ರಾಯ ತಿಳಿಸಲು ಅವಕಾಶ ನೀಡುವುದು.

***ಅಥವಾ***

ಆ) ***ಬರವಣಿಗೆ ಕೌಶಲವನ್ನು ಅನುಕೂಲಿಸುವ ಚಟುವಟಿಕೆಗಳು :***

* *ಕಾಪಿ ಬರೆಯುವುದು :*
  — ಮೊದಲು ಕಪ್ಪುಹಲಗೆಯಲ್ಲಿ ದೊಡ್ಡದಾಗಿ ಬರೆದು ತೋರಿಸಬೇಕು.
  — ದಿನಕ್ಕೊಂದು ಪುಟ ಎಂದು ನಿಗದಿ ಮಾಡುವುದಕ್ಕಿಂತ ಬರೆದಿರುವುದನ್ನು ಸರಿಯಾಗಿ ಬರೆಯಲು ಪದೇ ಪದೇ ಮಕ್ಕಳಿಗೆ ಹೇಳಬೇಕು.
* ಉಕ್ತಲೇಖನ ನೀಡುವುದು :
  — ವಾಕ್ಯಗಳನ್ನು ವಾಕ್ಯಗುಚ್ಛಗಳನ್ನು ಅರ್ಥಪೂರ್ಣ ಪದಗುಚ್ಛಗಳಾಗಿ ಹೇಳುವುದು.
  — ನಾವು ಮೊದಲು ಅರ್ಥಪೂರ್ಣ ಪದಗುಚ್ಛಗಳನ್ನು ಗುರುತಿಸಿಕೊಂಡಿರಬೇಕು.



institutes.aglasem.com
aglasem.com

— ವಿದ್ಯಾರ್ಥಿಗಳಿಗೆ ಸರಿಯಾದ ಸೂಚನೆ ನೀಡಿ ಸರಿಯಾಗಿ ಆಲಿಸಿ ಬರೆಯುವುದಕ್ಕೆ ಉತ್ತೇಜಿಸಬೇಕು.

∗ *ಪ್ರಬಂಧ ರಚನೆ :*

— ಪ್ರಬಂಧ ಬರೆಯುವ ಮೊದಲು ಪ್ರಬಂಧದ ಬಗ್ಗೆ ಚರ್ಚಿಸಿರಬೇಕು.

— ಚರ್ಚಿಸಿದ ವಿಷಯಗಳನ್ನು ತಮ್ಮದೇ ಆದ ಮಾತುಗಳಲ್ಲಿ ಬರೆಯಲು ತಿಳಿಸುವುದು.

— ವಿಷಯವನ್ನು ಹೇಗೆ ವಿಶ್ಲೇಷಿಸಬೇಕು, ಪ್ರಬಂಧದ ಹರವನ್ನು ಹೇಗೆ ಗುರುತಿಸಿಕೊಳ್ಳಬೇಕು, ಪ್ರಬಂಧ ಒಳಗೊಳ್ಳಲೇ ಬೇಕಾದ ಅಂಶಗಳಾವುವು ಎಂದು ಗುರುತಿಸಿಕೊಳ್ಳಬೇಕು.

∗ *ನಕಲು ಮಾಡುವುದು :*

— ನಕಲು ಮಾಡುವುದು ಬರವಣಿಗೆ ಕೌಶಲದ ಒಂದು ಮುಖ್ಯ ಹಂತ.

— ನಕಲು ಮಾಡುವುದು ಯಾಂತ್ರಿಕ ಪ್ರಕ್ರಿಯೆ ಆಗಬಾರದು.

— ಓದಿದ ಪಠ್ಯವನ್ನು ನೆನಪಿಸಿಕೊಂಡು ಬರೆಯಬೇಕು. ಹಾಗೆ ಮಾಡಿದರೆ ಪಠ್ಯವನ್ನು ತನ್ನೊಳಗೆ ತಾನು ಮರುಸೃಷ್ಟಿಸಿದಂತೆ.

— ಆಲಿಸಿದ ವಿಷಯವಸ್ತುವನ್ನು ತನ್ನದೇ ಮಾತುಗಳಲ್ಲಿ ಬರೆಯುವುದು.

— ಸ್ವತಂತ್ರವಾಗಿ ಪ್ರಬಂಧ ಕಥೆ, ಕವನ ಇತ್ಯಾದಿಗಳನ್ನು ಬರೆಯುವುದು.

***ಸೂಚನೆ :*** ವಿದ್ಯಾರ್ಥಿಗಳ ಉತ್ತರವನ್ನು ಗಮನಿಸಿ ಸೂಕ್ತ ಅಂಕಗಳನ್ನು ನೀಡುವುದು.

20. ಅ) ***ಪ್ರಾಥಮಿಕ ಹಂತದಲ್ಲಿ ಆಲಿಸುವಿಕೆ ಹಾಗೂ ಮೌಖಿಕ ಅಭಿವ್ಯಕ್ತಿಯಲ್ಲಿ ಎದುರಾಗುವ ಸಮಸ್ಯೆಗಳು:***

∗ ವೈಯಕ್ತಿಕ ಭಾಷಾ ವ್ಯವಸ್ಥೆಯಿಂದ ಸಾಮಾನ್ಯ ಭಾಷಾ ವ್ಯವಸ್ಥೆಗೆ ಬದಲಾಯಿಸಿಕೊಳ್ಳುವಾಗ ಉಂಟಾಗುವ ಅಭದ್ರತೆಯ ವಾತಾವರಣ.

∗ ಸೂಕ್ತ ಪದಗಳ ಕೊರತೆ.

∗ ಮನೆಭಾಷೆ ಪದಗಳನ್ನು ನಡು–ನಡುವೆ ಬಳಸುವುದು.

∗ ಉಚ್ಚಾರ – ವ್ಯತ್ಯಾಸ.

∗ ಒಬ್ಬರು ಹಲವರೊಂದಿಗೆ ಸಂವಹನ ಸಾಧಿಸಬೇಕಾದಾಗ ಉಂಟಾಗುವ ಒತ್ತಡ.



institutes.aglasem.com
aglasem.com

* ಮಕ್ಕಳ ಮನೆಭಾಷೆ ಕುರಿತಂತೆ ಶಿಕ್ಷಕರ ಧೋರಣೆಗಳು.
* ಆಡುಭಾಷೆಯ ಮೇಲಿನ ಪ್ರಭುತ್ವವೇ ಒಟ್ಟಾರೆ ಭಾಷೆಯ ಮೇಲಿನ ಪ್ರಭುತ್ವ ಎಂದು ಭಾವಿಸಿ ಮಕ್ಕಳಿಗೆ ಅವರ ಸಾಧ್ಯತೆಗಳನ್ನು ಇನ್ನೂ ವಿಸ್ತರಿಸಿಕೊಳ್ಳುವ ಅವಕಾಶಗಳನ್ನು ಸೃಷ್ಟಿಸದಿರುವುದು.
* ಪೋಷಕರ ನಿರೀಕ್ಷೆಯಿಂದ ಮಕ್ಕಳ ಮೇಲೆ ಶಿಕ್ಷಕರ ಮೇಲೆ ಬೀಳುವ ಒತ್ತಡ.
* ಆರಂಭಿಕ ಹಂತದಲ್ಲಿ ಭಾಷಾ ಕಲಿಕೆ ಅನುಕೂಲಿಸುವ ಕುರಿತಂತೆ ಶಿಕ್ಷಕರಿಗೆ ಹಾಗೂ ಮನೆಮಂದಿಗೆ ಇರಬಹುದಾದ ಜ್ಞಾನ ಹಾಗೂ ಅನುಭವದ ಕೊರತೆ.

***ಸೂಚನೆ :*** ಮೇಲಿನ ಯಾವುದಾದರೂ ಐದು ಅಂಶಗಳಿಗೆ ವಿವರಣೆ ನೀಡಿದಲ್ಲಿ ಅಂಕಗಳನ್ನು ನೀಡುವುದು.

***ಅಥವಾ***

ಆ) ***ಮಕ್ಕಳಿಂದ ಕಥೆ ಹೇಳಿಸಲು ಮಾಡಿಕೊಳ್ಳಬೇಕಾದ ತಯಾರಿ :***

* ಮಗುವಿಗೆ ಕಥೆಗಳು ಗೊತ್ತಿವೆ ಎನ್ನುವುದನ್ನು ಖಚಿತಪಡಿಸಬೇಕು. ಅಗತ್ಯವಿದ್ದರೆ ನಾವೇ ಕೆಲವು ಕಥೆಗಳನ್ನು ಹೇಳಬಹುದು. ಅಥವಾ ಹಿಂದೆ ಹೇಳಿದ ಕಥೆಗಳನ್ನು ನೆನಪಿಸಬಹುದು.
* ಮಗು ಕೇಳುವ ಕಥೆಯನ್ನು ಇತರರು ಆಲಿಸುವ ವಾತಾವರಣ ನಿರ್ಮಾಣ ಮಾಡಬೇಕು.
* ಮಗುವಿನ ಅಭಿವ್ಯಕ್ತಿಗೆ ಮುಕ್ತ ಅವಕಾಶ ನೀಡಿ ಯಾವುದೇ ರೀತಿಯ ಟೀಕೆ ಮಾಡಬಾರದು.
* ಮಗು ಮಾಡಬಹುದಾದ ತಪ್ಪುಗಳನ್ನು ತೋರಿಸಿಕೊಡುವ ಅಗತ್ಯವಿಲ್ಲ ಮಗು ಸುಲಲಿತವಾಗಿ ಮಾತನಾಡಲು ಅಭ್ಯಾಸ ಮಾಡುವುದೇ ಇಲ್ಲಿನ ಉದ್ದೇಶ.
* ಮಗು ಮಾಡುವ ತಪ್ಪುಗಳನ್ನು ಸರಿಪಡಿಸುತ್ತಾ ಹೋದಲ್ಲಿ ಮಗು ಅಂಜಿಕೊಂಡು ಮುಂದೆ ಮಾತನಾಡುವುದನ್ನೇ ಕಡಿಮೆ ಮಾಡಬಹುದು.
* ಮಗು ಕಥೆ ಹೇಳುವಾಗ ಅದನ್ನು ಬಹಿರಂಗವಾಗಿ ಮೆಚ್ಚಿಕೊಳ್ಳಬೇಕು. ಇದು ಮಗುವಿನ ಆತ್ಮವಿಶ್ವಾಸ ಹೆಚ್ಚಿಸುತ್ತದೆ.
* ಕಥೆ ಹೇಳುವುದರಲ್ಲಿ ಒಂದು ಹಂತದ ಪ್ರೌಢಿಮೆ ಬೆಳೆಸಿಕೊಂಡ ಬಳಿಕ ಕಥೆ ಹೇಳಲು ಸಮಯದ ಮಿತಿ ಹೇರಬಹುದು. ಇದರಿಂದ ಮಗು ತಾನು ಮುಖ್ಯವಾಗಿ ಹೇಳಬೇಕಾದ ಅಂಶಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವ ಅಭ್ಯಾಸ ಬೆಳೆಸಿಕೊಳ್ಳುತ್ತದೆ. ಅಂತೆಯೇ



institutes.aglasem.com
aglasem.com

ಕಥೆಯ ವಸ್ತುವಿನ ಕುರಿತಂತೆ ಮಗುವಿನ ಅಭಿಪ್ರಾಯ ಹೊರತರುವ ಕೆಲವು ಪ್ರಶ್ನೆಗಳನ್ನು ಕೇಳಬಹುದು. ಉತ್ತರ ಬಂದೇ ಬರುತ್ತದೆ ಉತ್ತರಗಳು ಯಾವಾಗಲೂ ಸರಿಯಾಗಿಯೇ ಇರುತ್ತವೆ ಎಂಬ ನಿರೀಕ್ಷೆ ಬೇಡ.

* ಮಕ್ಕಳು ಹೇಳುವ ಕಥೆಯಲ್ಲಿರುವ ತಾರ್ಕಿಕ ಅಸಂಬದ್ಧತೆಯನ್ನು ಈ ಹಂತದಲ್ಲಿ ಮಕ್ಕಳ ಗಮನಕ್ಕೆ ತರಲು ಪ್ರಯತ್ನಿಸಬಹುದು.
* ಕಥೆಯ ಕೊನೆಯಲ್ಲಿ ಕಥೆಯ ನೀತಿ ಹೇಳುವಂತೆ ಮಕ್ಕಳನ್ನು ಒತ್ತಾಯ ಮಾಡಬಾರದು.
* ಮಕ್ಕಳು ಮೌಲ್ಯಗಳನ್ನು ನೇರವಾಗಿ ತಮ್ಮದಾಗಿಸಿಕೊಳ್ಳಬಲ್ಲರೇ ಹೊರತು ಅದರ ಕುರಿತಂತೆ ಚಿಂತನೆಯಲ್ಲಿ ತೊಡಗಬಾರದು.
* ಕೆಲವು ಮಕ್ಕಳು ಒಂದು ಕಥೆ ಆರಂಭಿಸಿ ನಂತರ ಅವರದೇ ವಿವರಣೆ ಸೇರಿಸುತ್ತಾ ಅದನ್ನು ಬೆಳೆಸುತ್ತಾರೆ. ಇಲ್ಲಿ ಅವರು ಹೇಳುವ ಕಥೆಯ ತಾರ್ಕಿಕತೆಯನ್ನು ಮಾತ್ರ ನೋಡಬೇಕು.

***ಸೂಚನೆ :*** 10 ಅಂಶಗಳನ್ನು ಬರೆದಿದ್ದರೆ ಐದು ಅಂಕಗಳನ್ನು ನೀಡುವುದು.

21. ಅ) ***ಪದಗೋಡೆ ರಚಿಸುವಾಗ ಗಮನಿಸಬೇಕಾದ ಅಂಶಗಳು :***

* ಪದಗೋಡೆ ರಚನೆಯ ಉದ್ದೇಶ
* ಪದಗೋಡೆ ವಿಷಯದ ಆಯ್ಕೆ
* ಭಾಷಾ ಕಲಿಕೆಯ ಉದ್ದೇಶದ ಸ್ಪಷ್ಟತೆ
* ಬೇಕಾಗುವ ಸಾಮಗ್ರಿಗಳು
* ಕಲಿಕಾರ್ಥಿಗಳ ಸಾಮರ್ಥ್ಯ

ಪದಗೋಡೆಗಳನ್ನು ವಿವಿಧ ಉದ್ದೇಶಗಳಿಗಾಗಿ ಸೂಕ್ತ ರೀತಿಯಲ್ಲಿ ಬಳಸಬಹುದು.

(ಮೇಲಿನ ಅಂಶಗಳಿಗೆ ಉದಾಹರಣೆ ಸಹಿತ ವಿವರಣೆ ನೀಡುವುದು)

***ಸೂಚನೆ :*** ಮಕ್ಕಳ ಅಭಿವ್ಯಕ್ತಿಯನ್ನು ಗಮನಿಸಿ ಸೂಕ್ತ ಅಂಕಗಳನ್ನು ನೀಡುವುದು.

***ಅಥವಾ***

ಆ) ***ಮಗುವನ್ನು ಶಾಲಾ ಭಾಷೆಗೆ ಬದಲಾಯಿಸಲು ಶಿಕ್ಷಕರು ತೆಗೆದುಕೊಳ್ಳಬೇಕಾದ ಕ್ರಮಗಳು :***

* ಪ್ರತಿಯೊಂದು ಭಾಷೆಯೂ, ಭಾಷೆಯ ಪ್ರತಿಯೊಂದು ಪ್ರಭೇದವೂ ತನ್ನದೇ ಸ್ವರೂಪ ಹೊಂದಿರುತ್ತದೆ ಎಂಬುದು ತಿಳಿದಿರಬೇಕು.
* ಭಾಷೆಯಲ್ಲಿ ಮೇಲು ಕೀಳಲ್ಲ ಎನ್ನುವ ಮನೋಭಾವವನ್ನು ಶಿಕ್ಷಕರು ರೂಢಿಸಿಕೊಳ್ಳಬೇಕು.



institutes.aglasem.com
aglasem.com

* ಮಗುವಿನ ಮನೆಭಾಷೆಯ ಬಗ್ಗೆ ಯಾವುದೇ ರೀತಿಯ ಟೀಕೆ ಟಿಪ್ಪಣಿ ಮಾಡಬಾರದು.
* ಎಲ್ಲಾ ಮಕ್ಕಳೂ ಮೌಖಿಕವಾಗಿ ಸಂವಹಿಸುವ ಸಾಮರ್ಥ್ಯಗಳಿಸಿಯೇ ಬಂದಿರುತ್ತಾರೆ ಎಂಬ ತಿಳುವಳಿಕೆ ಇರಬೇಕು.

  (ಕೆಲವೇ ಕೆಲವು ಮಕ್ಕಳು ಈ ಸಾಮರ್ಥ್ಯಗಳಿಸದೆ ಬಂದಿರುವ ಸಾಧ್ಯತೆ ಇರುತ್ತದೆ. ಅದಕ್ಕೆ ಬಲವಾದ ಕಾರಣವೂ ಇರುತ್ತದೆ.)
* ಭಾಷಾ ಕಲಿಕೆಯಲ್ಲಿ ತಪ್ಪು ಮಾಡುವುದು ಸಹಜ. ಈ ತಪ್ಪುಗಳಲ್ಲಿಯೂ ಒಂದು ವಿನ್ಯಾಸವಿರುತ್ತದೆ ಮತ್ತು ತರ್ಕಬದ್ಧವಾಗಿರುತ್ತದೆ ಎಂದು ಅರ್ಥಮಾಡಿಕೊಳ್ಳಬೇಕು. ಆ ವಿನ್ಯಾಸವನ್ನು ಗುರುತಿಸಲು ಪ್ರಯತ್ನಿಸಬಹುದು.
* ಮಗು ಮಾತನಾಡುವಾಗ ಅದರ ತಪ್ಪುಗಳನ್ನು ಒಡನೆಯೇ ತಿದ್ದಬಾರದು. ಈ ರೀತಿ ತಿದ್ದುವುದರಿಂದ ಮಗುವಿನ ಆತ್ಮವಿಶ್ವಾಸಕ್ಕೆ ಧಕ್ಕೆಯಾಗುತ್ತದೆ.
* ಮನೆ ಭಾಷೆಯಿಂದ ಶಾಲಾ ಭಾಷೆಗೆ ಹೊಂದಿಕೊಳ್ಳಲು ಮಗುವಿಗೆ ಕಾಲಾವಕಾಶಬೇಕು.
* ಇಂತಿಷ್ಟೇ ಸಮಯದಲ್ಲಿ ಇಷ್ಟು ಸಾಧಿಸಲೇಬೇಕೆಂಬ ನಿರೀಕ್ಷೆಯನ್ನಿಟ್ಟುಕೊಂಡು ಮಕ್ಕಳನ್ನು ಬೆದರಿಸಬಾರದು.
* ಮಕ್ಕಳೇ ಈ ಸಂದರ್ಭವನ್ನು ಸಮರ್ಥವಾಗಿ ನಿಭಾಯಿಸಬಲ್ಲರೆಂಬ ನಂಬಿಕೆಯಿಂದ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುವುದು ಮುಖ್ಯ.

***ಸೂಚನೆ :*** ಯಾವುದಾದರೂ 5 ಅಂಶಗಳಿಗೆ ಸೂಕ್ತ ಉತ್ತರ / ವಿವರಣೆ ನೀಡಿದ್ದರೆ ತಲಾ ಒಂದರಂತೆ 5 ಅಂಕಗಳನ್ನು ನೀಡುವುದು.

22. ಅ) ***ದೊಡ್ಡ ಪುಸ್ತಕ ಬಳಸುವ ಸಂದರ್ಭದಲ್ಲಿ :***

* ದೃಷ್ಟಿದೋಷವಿರುವ ಮಕ್ಕಳನ್ನು ನಿಮ್ಮ ಬಳಿಯಲ್ಲಿಯೇ ಇತರರಿಗೆ ಅಡ್ಡವಾಗುವಂತೆ ಕೂರಿಸಿಕೊಳ್ಳುವುದು.
* ಪುಸ್ತಕ ರಚನೆಯಲ್ಲಿ ಬಿಳಿಯ ಹಾಳೆಯ ಮೇಲೆ ಕಪ್ಪು ಅಕ್ಷರ, ದೊಡ್ಡ ಅಕ್ಷರಗಳನ್ನು ಮತ್ತು ಚಿತ್ರಗಳಲ್ಲಿ ಒಂದುಕ್ಕೊಂದು ವ್ಯತಿರಿಕ್ತವಾಗಿರುವ ಬಣ್ಣಗಳನ್ನು ಬಳಸುವುದರಿಂದ ಹತ್ತಿರ ಕುಳಿತ ದೃಷ್ಟಿದೋಷವಿರುವ ಮಕ್ಕಳಿಗೆ ಸಹಾಯವಾಗುತ್ತದೆ.
* ಶ್ರವಣದೋಷವಿರುವ ಮಕ್ಕಳ ಸಲುವಾಗಿ ಕಥೆಯನ್ನು ಪುನಃ ಹೇಳುವುದರಿಂದ ಅವರು ಬರೆದಿರುವ ಅಕ್ಷರಕ್ಕೂ ನಿಮ್ಮ ತುಟಿಗಳ ಚಲನೆಗೂ ಸಂಬಂಧ ಕಲ್ಪಿಸಿಕೊಳ್ಳಲು ಸಹಾಯವಾಗುತ್ತದೆ.



institutes.aglasem.com
aglasem.com

* ಬುದ್ಧಿಮಾಂದ್ಯತೆ ಇರುವ ಮಕ್ಕಳಿಗಾಗಿ ಸಾಧ್ಯವಾದಷ್ಟು ಕಡಿಮೆ ಪದಗಳನ್ನು ಬಳಸಿ. ಆ ಪದಗಳನ್ನೇ ಮತ್ತೆ ಮತ್ತೆ ಹೇಳುತ್ತಿದ್ದರೆ ಅವರಿಗೆ ಚಿತ್ರಕ್ಕೂ ಪದಕ್ಕೂ ಸಂಬಂಧ ಕಲ್ಪಿಸಲು ಸಹಾಯಕವಾಗುತ್ತದೆ. ಕೆಲವು ವಸ್ತುಗಳ ಹೆಸರನ್ನು ಪರಿಚಯಿಸುವಾಗ ಆ ವಸ್ತುವಿನ ಮಾದರಿಯನ್ನು ತಂದು ಮಕ್ಕಳ ಕೈಯಲ್ಲಿ ಕೊಟ್ಟು ಆ ಪದ ಹೇಳಬಹುದು. IV ನೇ ತರಗತಿಯ ಪಠ್ಯವನ್ನು ಓದಲು ಸಾಧ್ಯವಿರುವ IV ನೇ ತರಗತಿ ಕಲಿಕಾ ನ್ಯೂನತೆ ಇರುವ ಮಕ್ಕಳಿಗಾಗಿ ಅದೇ ಪಠ್ಯವನ್ನು ಸರಳೀಕರಿಸಿ ದೊಡ್ಡ ಪುಸ್ತಕ ತಯಾರಿಸಿ ಈ ಮಕ್ಕಳೂ ಅವರಾಗಿಯೇ ಓದುವ ಅವಕಾಶವನ್ನು ಕಲ್ಪಿಸಿಕೊಡಬಹುದು.

* ಸಾಧ್ಯವಿದ್ದರೆ ದೊಡ್ಡ ಪುಸ್ತಕವನ್ನು ದೃಷ್ಟಿದೋಷವುಳ್ಳ ಮಕ್ಕಳಿಗಾಗಿ ಬ್ರೈಲ್ ಲಿಪಿಯಲ್ಲಿ ಕೊಡಬಹುದು.

***ಒಗಟಿನ ಕಾರ್ಡ್ ಬಳಸಿ ಕೆಳಗಿನ ಮಾರ್ಗೋಪಾಯ ಬಳಸಬಹುದು :***

* ಒಗಟನ್ನು ಕಾರ್ಡಿನ ರೂಪದಲ್ಲಿ ಕೊಟ್ಟರೆ ಬಿಳಿಯ ಮೇಲೆ ಕಪ್ಪು ಅಕ್ಷರ ದೊಡ್ಡ ಅಕ್ಷರ ಬಳಸಿ ಒಂದಕ್ಕೊಂದು ವ್ಯತಿರಿಕ್ತ ಬಣ್ಣ ಬಳಸಬೇಕು.
* ದೃಷ್ಟಿದೋಷವಿರುವ ಮಕ್ಕಳ ಕಾರ್ಡ್‌ಗಳನ್ನು ನೀವೇ ಓದಿ ಹೇಳಿ.
* ಬುದ್ಧಿಮಾಂದ್ಯ ಮಕ್ಕಳಿಗಾಗಿ ನೇರವಾಗಿರುವ ಸುಳಿವುಗಳನ್ನು ಕೊಡಿ.
* ಶ್ರವಣದೋಷ ಇರುವವರಿಗೆ ಹತ್ತಿರದಲ್ಲಿ ಕೂರಿಸಿಕೊಳ್ಳಿ, ಕಾರ್ಡ್ ಓದಿ ಉತ್ತರ ಬರೆಯಲು ಹೇಳಿ.
* ಪ್ರತಿಭಾವಂತರರಿಗೆ ಅವರೇ ಒಗಟು ರಚಿಸಲು ಅವಕಾಶ ಕೊಡಿ.

***ಸೂಚನೆ :*** ವಿದ್ಯಾರ್ಥಿಗಳ ಉತ್ತರವನ್ನು ಗಮನಿಸಿ ಸೂಕ್ತ ಅಂಕಗಳನ್ನು ನೀಡುವುದು.

***ಅಥವಾ***

ಆ) ***ಶ್ರವಣದೋಷ ಇರುವವರ ಸಮಸ್ಯೆಗಳು :***

* ಆಲಿಸುವಿಕೆ ಭಾಷಾ ಕಲಿಕೆಯಲ್ಲಿ ದೊಡ್ಡ ಪಾತ್ರವಹಿಸುತ್ತದೆ.
* ಶ್ರವಣದೋಷ ಇರುವವರಿಗೆ ತರಗತಿಯಲ್ಲಿ ಹೇಳಿದ್ದರ ಕೆಲವು ಭಾಗ ಮಾತ್ರ ಕೇಳಿಸುತ್ತದೆ. ಇದರಿಂದ ಕಲಿಕೆಗೆ ತೊಂದರೆಯಾಗುತ್ತದೆ.
* ಶಿಕ್ಷಕರ ಭಾಷಾ ಮಟ್ಟ ಮಗುವಿಗೆ ಬಹಳ ಕಷ್ಟವಾಗಬಹುದು.

***ಪರಿಹಾರೋಪಾಯ :***

* ಕಲಿಕೆಗೆ ಅಗತ್ಯವಿರುವ ಶಬ್ದದ ಮೂಲದ ಬಳಿಯೇ ಇರಬೇಕು.
* ಹಿನ್ನಲೆ ಗಲಾಟೆ ಇರಬಾರದು.



institutes.aglasem.com
aglasem.com

* ಕೊಟ್ಟ ಸೂಚನೆ ತಿರುಗಿ ಹೇಳಲು ಅವಕಾಶ.
* ಆಲಿಸಿ ಅರ್ಥೈಸಿಕೊಳ್ಳಲು ಸ್ನೇಹಿತರ ಸಹಾಯ.
* ಆಂಗಿಕ ಚಲನೆಯ ಮೂಲಕವೂ ಸೂಚನೆ ನೀಡುವುದು.
* ಕಪ್ಪುಹಲಗೆಯಲ್ಲಿ ಬರೆದು ತೋರಿಸುವುದು.

***ದೃಷ್ಟಿದೋಷ ಇರುವವರ ಸಮಸ್ಯೆಗಳು :***

* ಕಪ್ಪುಹಲಗೆಯಲ್ಲಿ ಬರೆದ ಅಕ್ಷರ ಸರಿಯಾಗಿ ಕಾಣದಿರುವುದು.
* ಶಿಕ್ಷಕರು ತೋರಿಸುವ ಮಿಂಚುಪಟ್ಟಿ, ಚಾರ್ಟ್ ಹಾಗೂ ಶಿಕ್ಷಕರು ನೀಡುವ ಅಭಿನಯದಂತಹ ಚಟುವಟಿಕೆಗಳು ಕಾಣದಿರುವುದು.

***ಪರಿಹಾರೋಪಾಯ :***

* ಚಿತ್ರಗಳನ್ನು ಪದಗಳ ಮೂಲಕ ವಿವರಿಸಬೇಕು.
* ತರಗತಿಯಲ್ಲಿ ಭೂತಗನ್ನಡಿ ಬಳಕೆ.
* ಅಗತ್ಯ ಬಿದ್ದರೆ ಸಹಪಾಠಿಗಳಿಂದ ಸಹಾಯ.
* ಕಪ್ಪುಹಲಗೆ ಬರವಣಿಗೆ ದೊಡ್ಡದಾಗಿರಬೇಕು.
* ಓದುವ ಸಾಮಗ್ರಿ ಸಮತಲದಲ್ಲಿರಬೇಕು.
* ಬರವಣಿಗೆಯನ್ನು ಚಿಕ್ಕ ಚಿಕ್ಕದಾಗಿ ವಿಭಜಿಸಿ ಬರೆಯಿರಿ.
* ಬರೆಯುವ ಚಟುವಟಿಕೆಯ ಮೊದಲು ಚರ್ಚೆಯಾಗಬೇಕು.
* ಕೈಯಲ್ಲಿ ಮುಟ್ಟಿ ತಿಳಿಯುವಂತಹ ಸಂಪನ್ಮೂಲ ಲಭ್ಯತೆ.

***ಸೂಚನೆ :*** ವಿದ್ಯಾರ್ಥಿಗಳ ಅಭಿವ್ಯಕ್ತಿ ಗಮನಿಸಿ ಅಂಕಗಳನ್ನು ನೀಡುವುದು.

23. ಅ) ***ಓದುವ ಚಟುವಟಿಕೆ ಹಮ್ಮಿಕೊಳ್ಳುವ ಮೊದಲು ಅನುಸರಿಸಬೇಕಾದ ಪೂರ್ವಸಿದ್ಧತೆಗಳು :***

* ಮೌಖಿಕ ಕೌಶಲಗಳಲ್ಲಿ ಪ್ರೌಢಿಮೆ
* ಅಕ್ಷರ ಪದಗಳ ಪರಿಚಯ
* ಉದ್ದೇಶಗಳ ಸ್ಪಷ್ಟತೆ
* ಚಟುವಟಿಕೆಗಳನ್ನು ಯೋಜಿಸುವುದು
* ಓದುವ ವಿಷಯ ವಸ್ತುವಿನ ಸಂಕ್ಷಿಪ್ತ ಪರಿಚಯ ನೀಡುವುದು



institutes.aglasem.com
aglasem.com

* ಹೊಸ ಪದಗಳ ಪರಿಚಯ ಮಾಡಿಸುವುದು

* ಪರಾಮರ್ಶನ ಸಾಹಿತ್ಯ ಲಭ್ಯಗೊಳಿಸುವುದು

* ಔಪಚಾರಿಕ ಪಠ್ಯ ಓದಲು ತರಬೇತಿ

* ಓದುವ ಪಠ್ಯದ ಅತಿ ಮುಖ್ಯ ಅಂಶಗಳನ್ನು ಗುರುತಿಸಲು ತರಬೇತಿ

***ಸೂಚನೆ :*** ಓದುವಿಕೆಯನ್ನು ಅನುಕೂಲಿಸುವ ಚಟುವಟಿಕೆಗಳಲ್ಲಿ ಹಾಗೂ ಅನುಸರಿಸಬೇಕಾದ ಪೂರ್ವ ಸಿದ್ಧತೆಗಳಲ್ಲಿ ಯಾವುದಾದರೂ 5 ಅಂಶಗಳಿಗೆ ಸಂಕ್ಷಿಪ್ತವಾಗಿ ವಿವರಣೆ ನೀಡಿದ್ದರೆ ಪೂರ್ಣ ಅಂಕಗಳನ್ನು ನೀಡುವುದು.

***ಅಥವಾ***

ಆ) ***ಓದುವಿಕೆಯನ್ನು ಅನುಕೂಲಿಸುವ ಚಟುವಟಿಕೆಗಳು :***

* ಮಿಂಚುಪಟ್ಟಿಗಳ ಬಳಕೆ.

* ನಾವು ಗಟ್ಟಿಯಾಗಿ ಓದಿ ಮಕ್ಕಳಿಗೆ ನಮ್ಮನ್ನು ಅನುಸರಿಸಲು ತಿಳಿಸುವುದು.

* ಮಕ್ಕಳಿಗೆ ಸ್ವತಂತ್ರವಾಗಿ ಗಟ್ಟಿಯಾಗಿ ಓದಲು ತಿಳಿಸುವುದು.

* ಶಿಕ್ಷಕರು ಪಾಠ ಭಾಗವನ್ನು ಗಟ್ಟಿಯಾಗಿ ಓದಿ ಬಳಿಕ ಕೆಲವು ಪ್ರಶ್ನೆಗಳನ್ನು ನೀಡಿ ಮೌನವಾಗಿ ಓದಿ ಅವುಗಳಿಗೆ ಉತ್ತರ ಕಂಡುಕೊಳ್ಳಲು ತಿಳಿಸಬಹುದು.

* ಚಿಕ್ಕ-ಚಿಕ್ಕ ಕಥೆಗಳನ್ನು ಚಿತ್ರಸಹಿತ ಬುಲೆಟಿನ್ ಬೋರ್ಡ್‌ನಲ್ಲಿ ಪ್ರದರ್ಶಿಸುವುದು.

* ಶಾಲೆಗಳಲ್ಲಿ ಮಕ್ಕಳ ಸಾಹಿತ್ಯ ಸಾಕಷ್ಟು ಲಭ್ಯವಿರುವಂತೆ ವ್ಯವಸ್ಥೆ ಮಾಡುವುದು.

* ಮಕ್ಕಳು ತಾವು ಓದಿದ ಕಥೆಗಳ ಸಾರಾಂಶವನ್ನು ಬರೆದು ಬುಲೆಟಿನ್ ಬೋರ್ಡ್‌ನಲ್ಲಿ ಪ್ರದರ್ಶಿಸಲು ಅವಕಾಶ ನೀಡುವುದಿಲ್ಲ.

* ಎರಡು ಕಥೆಗಳನ್ನು ಮಿಶ್ರಮಾಡಿ ಬರೆಯಲು ಕೊಡುವುದು.

* ಓದಿದ ಪಠ್ಯವು ನಾಟಕವಾಗಿದ್ದರೆ, ಪದ್ಯಕ್ಕೆ ಗದ್ಯವಾಗಿದ್ದರೆ, ನಾಟಕಕ್ಕೆ ರೂಪಾಂತರಿಸಲು ತಿಳಿಸುವುದು.

* ಪದಬಂಧ ರಚನೆ.

***ಸೂಚನೆ :*** ಮೇಲಿನ ಅಂಶಗಳಲ್ಲಿ ಯಾವುದಾದರೂ 5 ಕ್ಕೆ ಸಂಕ್ಷಿಪ್ತವಾಗಿ ಉತ್ತರ ನೀಡಿದ್ದರೆ ಪೂರ್ಣ ಅಂಕಗಳನ್ನು ನೀಡುವುದು.



institutes.aglasem.com
aglasem.com

24. ಅ)

- ಭಾಷಾ ತರಗತಿ ಸಂಪನ್ಮೂಲಗಳು
  - ಮೂಲ ಸಂಪನ್ಮೂಲಗಳು
    - ಮಕ್ಕಳು — ಉದಾ : ಮಗುವವಿನ ಮಾತು
    - ಶಿಕ್ಷಕರು — ಉದಾ : ಶಿಕ್ಷಕರ ಮಾತು
    - ಸಮಾಜ — ಉದಾ : ಕುಟುಂಬ
    - ಪ್ರಕೃತಿ — ಉದಾ : ತರಗತಿಯಲ್ಲಿರುವ ಪ್ರತಿಯೊಂದು ವಸ್ತುಗಳು ಹೊರಗಡೆ ಇರುವ ಸಂಪನ್ಮೂಲಗಳು
  - ವಸ್ತು ಆಧರಿತ ಸಂಪನ್ಮೂಲಗಳು

- ವಸ್ತು ಆಧರಿತ ಸಂಪನ್ಮೂಲ
  - ಸಾಹಿತ್ಯಕ / ಮುದ್ರಿತ — ಉದಾ : ಪಠ್ಯಪುಸ್ತಕ ಪರಾಮರ್ಶನ ಗ್ರಂಥಗಳು ಶಬ್ದಕೋಶಗಳು
  - ದೃಶ್ಯಾತ್ಮಕ — ಉದಾ : ಟಿ.ವಿ. ಚಿತ್ರಪಟ, ಪ್ರೊಜೆಕ್ಟರ್, ಗೋಡೆ, ಪತ್ರಿಕೆ, ಗೊಂಬೆ ಮಾದರಿ

✳ ಶ್ರಾವ್ಯಾತ್ಮಕ :

ಉದಾ. : ರೇಡಿಯೋ, ಟೇಪ್ರಿಕಾರ್ಡರ್ ಸಾಹಿತ್ಯಕ ಹಾಡುಗಲು, ಕಥೆಗಳು, ಕವನವಾಚನ.

✳ ತಾಂತ್ರಿಕ : ಕಂಪ್ಯೂಟರ್, ಟ್ಯಾಬ್ಲೆಟ್, ಸೆಲ್‌ಫೋನ್.

***ಸೂಚನೆ :*** ವಿದ್ಯಾರ್ಥಿಗಳ ಉತ್ತರವನ್ನು ಗಮನಿಸಿ ಸೂಕ್ತ ಅಂಕ ನೀಡುವುದು. ಮನೋನಕ್ಷೆಗೆ 3 ಅಂಕಗಳನ್ನು ಉದಾಹರಣೆಗಳಿಗೆ 2 ಅಂಕಗಳನ್ನು ನೀಡುವುದು.

***ಅಥವಾ***

ಆ) ***ನೀವು ಗಮನಿಸಿದಂತೆ ನಲಿ-ಕಲಿ ಪದ್ಧತಿ :***

✳ ನಲಿ–ಕಲಿ ಕಾರ್ಡ್‌ಗಳು

✳ ಕಲಿಕಾ ಚಪ್ಪರ

✳ ಪ್ರಗತಿ ನಕ್ಷೆ

✳ ಕಪ್ಪುಹಲಗೆ



institutes.aglasem.com
aglasem.com

* ಹವಾಮಾನ ನಕ್ಷೆ
* ಏಣಿ
* ಮೆಟ್ಟಿಲು
* ಕಲಿಕಾ ಸಂಪನ್ಮೂಲಗಳು
* ನಲಿ–ಕಲಿ ಹಾಡು
* ನಲಿ–ಕಲಿ ಚಪ್ಪಾಳೆ
* ಶಿಕ್ಷಕರ ಸಂಪೂರ್ಣ ಸಹಾಯ
* ಗೆಳೆಯರ ಸಹಾಯ
* ಶಿಕ್ಷಕರ ಭಾಗಶಃ ಸಹಾಯ
* ಗೆಳೆಯರ ಭಾಗಶಃ ಸಹಾಯ
* ಸ್ವ–ಕಲಿಕೆ

***ಸೂಚನೆ :*** ಮೇಲಿನ ಅಂಶಗಳಲ್ಲಿ ಯಾವುದಾದರೂ 5 ನ್ನು ವಿವರಿಸಿದ್ದರೆ 5 ಅಂಕಗಳನ್ನು ನೀಡುವುದು.

25. ಅ) ***ಮಂದಗತಿಯಲ್ಲಿ ಕಲಿಯುವವರ ಲಕ್ಷಣಗಳು :***

* ಕೆಲವು ಮಕ್ಕಳ ಚಿಂತನಾಶಕ್ತಿಯ ಬೆಳವಣಿಗೆ ಅವರ ವಯಸ್ಸಿಗನುಗುಣವಾಗಿ ಇರುವುದಿಲ್ಲ ಎಲ್ಲಾ ಮಕ್ಕಳಂತೆಯೇ ಅವರ ಬೆಳವಣಿಗೆ ಇದ್ದರೂ ಬೌದ್ಧಿಕ ಬೆಳವಣಿಗೆ ಮಂದಗತಿಯಲ್ಲಿ ಸಾಗಿರುತ್ತದೆ.
* ಇವರ ಮನೆಭಾಷೆಯ ಪ್ರೌಢಿಮೆ ಸಮವಯಸ್ಕರಿಗಿಂತ ಕಡಿಮೆ ಇರುವುದು.
* ಸಹಪಾಠಿಗಳೊಡನೆ ಒಡನಾಡುವಾಗಲೂ ಇತರರಿಗಿಂತ ಕಡಿಮೆ ಪ್ರೌಢಿಮೆ ತೋರುತ್ತಿರಬಹುದು.
* ಬಹಳ ಬೇಗ ಹತಾಶರಾಗುವುದು.
* ನೆನಪಿನ ಶಕ್ತಿಯ ತೊಂದರೆ ಇರಬಹುದು.
* ಒಂದು ಕಾರ್ಯದಲ್ಲಿ ಅನೇಕ ಹೆಜ್ಜೆಗಳಿದ್ದರೆ ಅದನ್ನು ಅನುಸರಿಸುವುದರಲ್ಲಿ ತೊಂದರೆ.

***ಸೂಚನೆ :*** ಮೇಲಿನ ಅಂಶಗಳಲ್ಲಿ ಯಾವುದಾದರೂ 5 ನ್ನು ಸಂಕ್ಷಿಪ್ತವಾಗಿ ವಿವರಿಸಿದ್ದರೆ 5 ಅಂಕಗಳನ್ನು ನೀಡುವುದು.

***ಅಥವಾ***



institutes.aglasem.com
aglasem.com

ಆ) ಒಳಗೊಳ್ಳುವಿಕೆ ಎಂದರೆ,

ತರಗತಿಯ ಪ್ರತೀ ವಿದ್ಯಾರ್ಥಿಯೂ ತನ್ನ ಸಾಮರ್ಥ್ಯಕ್ಕನುಗುಣವಾಗಿ ಕಲಿಯಲು, ಬೆಳೆಯಲು, ಸಾಧಿಸಲು, ಅನುಕೂಲಿಸುವ ಶೈಕ್ಷಣಿಕ ಆಚರಣೆಗಳನ್ನು, ಚಿಂತನೆಗಳನ್ನು ಒಳಗೊಳ್ಳುವಿಕೆ ಎನ್ನಬಹುದು. ಇದು ಇಂಗ್ಲಿಷ್‌ನ 'ಇನ್‌ಕ್ಲ್ಯೂಸಿವ್' ಎನ್ನುವ ಪದದ ಕನ್ನಡ ಅನುವಾದ.

ಎಲ್ಲಾ ಮಕ್ಕಳನ್ನು ಒಳಗೊಳ್ಳುವಂತಹ ತರಗತಿ ಆಚರಣೆಗಳನ್ನು ಒಳಗೊಳ್ಳುವಿಕೆಯುಕ್ತ ಆಚರಣೆಗಳು ಎನ್ನಬಹುದು. ಒಳಗೊಳ್ಳುವ ತರಗತಿಗಳಲ್ಲಿ ಪ್ರತೀ ಮಗುವೂ ತನ್ನತನವನ್ನು ಕಾಪಾಡಿಕೊಂಡು ಎಲ್ಲರೊಡನೆ ಬೆರೆತು ಕಲಿಯುವ ಪರಿಸರವಿರುತ್ತದೆ.

***ಒಳಗೊಳ್ಳುವ ತರಗತಿಯ ಶಿಕ್ಷಕರ ಭಾಷೆ :***

* ಒಳಗೊಳ್ಳುವ ಒಂದು ಮುಖ್ಯ ಆಯಾಮ ನಾವು ಬಳಸುವ ಭಾಷೆ.
* ಭಾಷೆ ನಮ್ಮ ಚಿಂತನೆಯನ್ನು ಪ್ರತಿಫಲಿಸುತ್ತದೆ. ಆದ್ದರಿಂದ ನಾವು (ಶಿಕ್ಷಕರು) ಬಳಸುವ ಭಾಷೆ ಅದರ ಧ್ವನಿ ಏರಿಳಿತಗಳು, ಬಳಸುವ ಪದಗಳು ಅಂತಿಮವಾಗಿ ಸೂಚಿಸುವುದು ನಮ್ಮ ಚಿಂತನೆ ನಿಲುವುಗಳನ್ನೇ.
* ಮಕ್ಕಳು ಸೂಕ್ಷ್ಮವಾಗಿ ದೊಡ್ಡವರನ್ನು ಗಮನಿಸುತ್ತಿರುತ್ತಾರೆ ಮತ್ತು ಕಲಿಯುತ್ತಿರುತ್ತಾರೆ. ಹಾಗಾಗಿ ಶಿಕ್ಷಕರು ಎಚ್ಚರಿಕೆಯಿಂದ ಮಾತನಾಡಬೇಕು.
* ಒಳಗೊಳ್ಳುವ ತರಗತಿಯಲ್ಲಿ ಶಿಕ್ಷಕರ ಮಾತು ಯಾರನ್ನು ಪ್ರತ್ಯೇಕಿಸಬಾರದು ಮತ್ತು ಯಾರನ್ನು ಸಾಮಾನ್ಯೀಕರಿಸಬಾರದು.
* ಕೆಲವು ಸಲ ನಾವು ಮಕ್ಕಳಿಗೆ ಕೆಲವು ಹಣೆ ಪಟ್ಟಿಗಳನ್ನು ಕಟ್ಟಿ ಅವರು ಬೇರೆ ಎನ್ನುವ ರೀತಿ ಅವರನ್ನು ಗುರುತಿಸುತ್ತೇವೆ. – ಜಾಣೆ, ಒಳ್ಳೆಯವಳು, ಕೋಪಿಷ್ಟ ಇತ್ಯಾದಿ...
* ಒಳಗೊಳ್ಳುವ ಶಿಕ್ಷಕರು ಪ್ರತ್ಯೇಕಿಸುವುದು, ಸಾಮಾನ್ಯೀಕರಿಸುವುದನ್ನು ಗಮನಿಸಿ ಅದನ್ನು ತಡೆಯಬೇಕು.
* ಓದುವ ಸಾಮಗ್ರಿಗಳಲ್ಲಿ ಶಿಕ್ಷಕರ ಮಾತುಗಳಲ್ಲಿ ಈ ರೀತಿಯ ಭಾವನೆಗಳಿದ್ದರೆ ಅದನ್ನು ನಿರಾಕರಿಸಬೇಕು.
* ಸಮುದಾಯದಲ್ಲಿ ಬಳಕೆಯಲ್ಲಿ ಇರುವ ಭಾಷೆಯನ್ನು ಪ್ರಜ್ಞಾಪೂರ್ವಕವಾಗಿ ಚರ್ಚಿಸಿ ಮಕ್ಕಳ ಮನಸ್ಸನ್ನು ಪರಿವರ್ತಿಸಲು ಯತ್ನಿಸಬೇಕು.
* ತರಗತಿಯಲ್ಲಿ ಶಿಕ್ಷಕರ ಮಾತು ಲಿಂಗ ತಟಸ್ಥವಾಗಿರಬೇಕು.
  ಉದಾ. : ರೈತ.
* ಶಿಕ್ಷಕರು ಮಾತನಾಡುವಾಗ ಕೇಳಿಸಿಕೊಳ್ಳುವುದರ ಜೊತೆಗೆ ಅದನ್ನು ಗೌರವಿಸುವಂತಿರಬೇಕು.

***ಸೂಚನೆ :*** ಒಳಗೊಳ್ಳುವಿಕೆಗೆ 2 ಅಂಕ ಒಳಗೊಳ್ಳುವ ಭಾಷೆ ಕನಿಷ್ಠ 8 ಅಂಶಗಳಿದ್ದರೆ 4 ಅಂಕಗಳನ್ನು ನೀಡುವುದು.



institutes.aglasem.com
aglasem.com

26. ಅ) * ಕೊಟ್ಟಿರುವ ಪದ್ಯವನ್ನು ನಾಟಕಕ್ಕೆ ರೂಪಾಂತರಿಸಿದ್ದರೆ – 3 ಅಂಕಗಳು

* ಪದ್ಯಕ್ಕೆ ಸೂಕ್ತವಾದ ಸಂಭಾಷಣೆ ಹಾಗೂ ಕ್ರಮಬದ್ಧತೆಗೆ – 1 ಅಂಕ

* ಭಾಷಾ ಸ್ಪಷ್ಟತೆಗೆ – 1 ಅಂಕ ನೀಡುವುದು.

***ಅಥವಾ***

ಆ) ಬಸವಣ್ಣನವರ ಈ ವಚನದಲ್ಲಿ ಜೀವನದಲ್ಲಿ ದೇವರನ್ನು ಕಾಣಲು ಅಂತರಂಗಶುದ್ಧಿ ಬಹಳ ಮುಖ್ಯ ಎನ್ನುವುದನ್ನು ಬಣ್ಣಿಸಲು ಯಾರನ್ನು ಕೊಲ್ಲಬೇಡ, ಕಳ್ಳತನ ಮಾಡಬೇಡ, ಸುಳ್ಳು ಹೇಳಬೇಡ, ಸಿಟ್ಟು ಮಾಡಬೇಡ, ಬೇರೆಯವರನ್ನು ನೋಡಿ ಅಸಹ್ಯಪಡಬೇಡ ತನ್ನನ್ನು ತಾನು ಹೊಗಳಿಕೊಳ್ಳಬೇಡ, ಬೇರೆಯವರ ಬಗ್ಗೆ ಹಿಯ್ಯಾಳಿಸಿ ಮಾತನಾಡಬೇಡ. ಹೀಗಿದ್ದರೆ ಇದೇ ನಮ್ಮ ಅಂತರಂಗ ಶುದ್ಧವಾಗಿರುತ್ತದೆ ಎಂದು. ಅನ್ಯ ಚಿಂತೆಗಿಂತ ದೇವರನ್ನು ಕಾಣಬೇಕು ಎಂಬ ಚಿಂತೆ ಮುಖ್ಯ ಎಂದಿದ್ದಾರೆ.

ಅಕ್ಕಮಹಾದೇವಿಯವರು ಭಾವನಾತ್ಮಕವಾಗಿ ಜೀವನದ ನೋವು-ನಲಿವುಗಳನ್ನು ಬಣ್ಣಿಸಿದ್ದಾರೆ.

ಬೆಟ್ಟದ ತುದಿಯಲ್ಲಿ ಮನೆ ಮಾಡಿಕೊಂಡು ಪ್ರಾಣಿಗಳಿಗೆ ಹೆದರಿದರೆ ಹೇಗೆ ? ಎಂದು, ಸಮುದ್ರದ ದಡದಲ್ಲಿ ಮನೆ ನೊರೆ ತೊರೆಗಳಿಗೆ ಹೆದರಿದರೆ ಆಗುತ್ತದೆಯೇ. ಸಂತೆಯಲ್ಲಿ ಮನೆಯ ಮಾಡಿ ಶಬ್ದಕ್ಕೆ ನಾಚಿದರೆ ಆಗುತ್ತದೆಯೇ ದೇವರೆ ಕೇಳು ಈ ಲೋಕದಲ್ಲಿ ಹುಟ್ಟಿದ ಮೇಲೆ ಹೊಗಳಿಕೆ, ತೆಗಳಿಕೆ ಸಾಮಾನ್ಯ. ತೆಗಳಿದಾಕ್ಷಣ ಕೋಪ ಮಾಡಿಕೊಳ್ಳದೆ ಸಮಾಧಾನಿಯಾಗಿರಬೇಕು ಎಂದಿದ್ದಾರೆ.

***ಸೂಚನೆ :*** ಈ ಪದ್ಯವನ್ನು ಗದ್ಯರೂಪಕ್ಕೆ ರೂಪಾಂತರಿಸುವಾಗ ಮೂಲ ಆಶಯಕ್ಕೆ ದಕ್ಕೆಯಾಗದಂತೆ ಇದ್ದರೆ ಭಾಷೆಯು ಸ್ಪಷ್ಟತೆ ಇದ್ದರೆ 5 ಅಂಕಗಳನ್ನು ನೀಡುವುದು. (ತಲಾ ಒಂದಕ್ಕೆ ½ ಅಂಕ)



institutes.aglasem.com
aglasem.com